# ವಾಸ್ತವದ ನೆರಳಲ್ಲಿ ಭಾವನೆಗಳ ಹೊಯ್ದಾಟ

ನಾನು ಅವನನ್ನು ತುಂಬಾ ಪ್ರೀತಿಸುತ್ತಿದ್ದೆ, ಈಗ ನನ್ನ ಮನಸ್ಸಿನಲ್ಲಿ ಅವನ ಬಗ್ಗೆ ಅದೆಷ್ಟು ಪ್ರೀತಿಯಿದೆ ಎಂದು ಹೇಳುವುದು ಕಷ್ಟ. ಆದರೂ ಅವನು ಪ್ರತಿ ಕ್ಷಣ ನನ್ನೊಂದಿಗಿರುತ್ತಾನೆ. ಶರೀರದೊಂದಿಗೆ ಅಲ್ಲದಿದ್ದರೂ, ಒಂದು ಪ್ರಭಾವವಾಗಿ, ಒಂದು ನೆರಳಾಗಿರುತ್ತಾನೆ. ನಾನು ಈಗ ಯಾವ ಪುರುಷನನ್ನು ನೋಡಿದರೂ ಅಥವಾ ಪುರುಷನೊಬ್ಬನ ಬಿಸಿಯನ್ನು ಅನುಭವಿಸಲು ಬಯಸಿದಾಗ, ನನ್ನ ಮನಸ್ಸು ಅವನೊಂದಿಗೆ ಹೋಲಿಕೆಯನ್ನು ಮಾಡಲು ಆರಂಭಿಸುತ್ತದೆ. ಒಂದು ವೇಳೆ ಇವನ ಜಾಗದಲ್ಲಿ ಅವನಿದ್ದಿದ್ದರೆ, ಅವನೂ ಹೀಗೆಯೇ ಮಾಡುತ್ತಿದ್ದನೇ? ಅವನು ಇವನಿಗಿಂತ ಸಭ್ಯನಾಗಿದ್ದ, ಇವನಿಲ್ಲ. ನನಗೇನು ಇಷ್ಟವಾಗುತ್ತದೆ, ಏನು ಇಷ್ಟವಾಗುವುದಿಲ್ಲ ಎಂದು ಅವನಿಗೆ ಚೆನ್ನಾಗಿ ಅರ್ಥವಾಗಿತ್ತು. ಆದರೆ ಇವನಿಗೆ ತಿಳಿಯಪಡಿಸಬೇಕೆಂದು ಅನ್ನಿಸುತ್ತದೆ. ಒಮ್ಮೊಮ್ಮೆ ಹೋಲಿಕೆ ಯಾವ ಮಟ್ಟಕ್ಕೆ ಹೋಗುತ್ತದೆ ಎಂದರೆ ಚುಂಬನ, ಆಲಿಂಗನ ಮತ್ತು ಕಾಮಕಲೆಗಳ ನಡುವೆ ಅವನು ನನ್ನ ಮತ್ತು ಬೇರೆ ಪುರುಷರ ನಡುವೆ ಬಂದು ನಿಲ್ಲುತ್ತಾನೆ. ಈ ವಿಚಿತ್ರ ಜೀವನವನ್ನು ನಾನೇ ಸಾಗಿಸಬೇಕಿತ್ತೆ? ನನ್ನೊಂದಿಗೆ ಹೀಗೇಕಾಯಿತು? ಪ್ರಶ್ನೆಗಳಿಗೆ ಉತ್ತರ ಹುಡುಕಲು ಹೊರಟಾಗ, ನನ್ನಲ್ಲಿ ನಾನೇ ಸಿಲುಕಿಕೊಳ್ಳುತ್ತಾ ಹೋಗುತ್ತೇನೆ.

ನಾನು ಸುಗಂಧಾ. ಹೌದು, ಇದು ನನ್ನ ಹೆಸರು. ಈ ಹೆಸರನ್ನು ನನ್ನ ತಂದೆ ಇಟ್ಟಿದ್ದರು. ನನ್ನ ತಾಯಿಗೆ ತನ್ನದೇ ಆದ ಆಸೆಗಳಿರಲಿಲ್ಲ. ಅವರಿಗೂ ಅಪ್ಪ ಇಟ್ಟ ಈ ಹೆಸರು ಇಷ್ಟವಾಗಿತ್ತು; ಅವರು ನನ್ನನ್ನು ಇದೇ ಹೆಸರಿನಿಂದ ಕರೆದರು. ಅವನು ಸಹ ನನ್ನನ್ನು ಇದೇ ಹೆಸರಿನಿಂದ ಕರೆಯುತ್ತಿದ್ದಾನೆ. ಯಾರಿಗೆ ಯಾವ ಹೆಸರಿರುವುದೋ, ಅವರನ್ನು ಅದೇ ಹೆಸರಿನಿಂದ ಕರೆಯಲಾಗುವುದಿಲ್ಲವೇ? ಹಾಗಂತ ಒಮ್ಮೊಮ್ಮೆ ಸಂಬೋಧನೆ ಬದಲಾಗುತ್ತದೆ. ಹೆಸರಿನ ಬದಲು ಸಂಬೋಧನೆಗಳಿಂದಲೇ ಕಾರ್ಯಗಳನ್ನು ನಡೆಸಲಾಗುತ್ತದೆ, ಸಾಮಾನ್ಯವಾಗಿ ಅವ್ಯವಸ್ಥೆ ಅಲ್ಲಿಯೇ ಸಂಭವಿಸುತ್ತದೆ. ಒಳ್ಳೆಯ ಶಬ್ದಗಳು, ಕೆಟ್ಟ ಶಬ್ದಗಳು ಅಲ್ಲಿಯೇ ಹುಟ್ಟುತ್ತವೆ. ಒಳ್ಳೆಯ ಸಂಬೋಧನೆ ಅಂದರೆ ಒಳ್ಳೆಯ ಶಬ್ದಗಳು, ಕೆಟ್ಟ ಸಂಬೋಧನೆ ಅಂದರೆ ಕೆಟ್ಟ ಶಬ್ದಗಳು.

ಅವನು ನನ್ನನ್ನು ಒಳ್ಳೆಯ ಶಬ್ದಗಳಿಂದಲೂ ಕರೆದ, ಕೆಟ್ಟ ಶಬ್ದಗಳೆಂದು ಹೇಳಲಾಗುವ ಸಂಬೋಧನೆಗಳಿಂದಲೂ ಕರೆದ. ಸಂಬಂಧ ಈ ತಿರುವಿಗೆ ಬರುತ್ತದೆಂದು ನಾನೆಂದೂ ಯೋಚಿಸಿರಲಿಲ್ಲ. ವಿಷಯ ಮುಂದುವರೆಯಿತು, ನಂತರ ಮುಂದುವರೆಯುತ್ತಲೇ ಸಾಗಿತು. ಹಾಗಂತ ನಮ್ಮಿಬ್ಬರ ನಡುವೆ ಅನೇಕ ಬಾರಿ ವಿಷಯ ಮುಂದುವರೆದಿದೆ. ಒಮ್ಮೆ ಎಲ್ಲಿಯವರೆಗೆ ಮುಂದುವರೆಯಿತೆಂದರೆ, ನಾನು ರಿತಿಕ್‌ನನ್ನು ತಳ್ಳಿ ಕೆಳಗೆ ಬೀಳಿಸಿದ್ದೆ. ಇದು ನನ್ನ ಪ್ರತಿಕ್ರಿಯೆಯಾಗಿತ್ತು. ನಾನು ಇದನ್ನು ಹೊರತುಪಡಿಸಿ ಬೇರಾವ ಪ್ರತಿಕ್ರಿಯೆಯನ್ನು ಮಾಡಲು ಸಾಧ್ಯವಿರಲಿಲ್ಲ. ಒಂದು ಗುಂಪು ಸಿಟ್ಟಿನ ಭರದಲ್ಲಿದ್ದರೆ, ಇನ್ನೊಂದು ಗುಂಪು ಶಾಂತವಾಗಿರಬೇಕು ಎಂದು ಜನ ಹೇಳುತ್ತಾರೆ. ಆದರೆ ವ್ಯಾವಹಾರಿಕವಾಗಿ ಇದೆಂದಿಗೂ ನಡೆಯುವುದಿಲ್ಲ. ಮೊದಲು ಒಬ್ಬ ಕಿರುಚುತ್ತಾನೆ, ನಂತರ ಇನ್ನೊಬ್ಬ ಕಿರುಚುತ್ತಾನೆ; ಮೊದಲು ಒಬ್ಬ ಪ್ರಹಾರವೆಸಗುತ್ತಾನೆ, ನಂತರ ಇನ್ನೊಬ್ಬ ಪ್ರಹಾರವೆಸಗುತ್ತಾನೆ. ಇದೇ ಮನುಷ್ಯನೊಳಗೆ ನಿದ್ರಿಸಿರುವ ಪಶು ಪ್ರವೃತ್ತಿಯಾಗಿದೆ, ಇದನ್ನೂ ಜನರೇ ಹೇಳುತ್ತಾರೆ. ಜನ ಅಂದರೆ ಶ್ರೇಷ್ಠ ಸಾಧುಸಂತರು, ಜ್ಞಾನಿಗಳು, ಮಹಾತ್ಮರು, ಪ್ರವಚನಕಾರರು ಮುಂತಾದವರು. ಈಗ ಇದನ್ನು ಪಶು ಪ್ರವೃತ್ತಿ ಎಂದು ಹೇಳುವುದೋ ಅಥವಾ ಮನುಷ್ಯನ ಸ್ವಾಭಾವಿಕ ಪ್ರವೃತ್ತಿ ಎನ್ನುವುದೋ? ಇವುಗಳಲ್ಲಿ ಏನು ವ್ಯತ್ಯಾಸವಿದೆ? ಒಟ್ಟಿನಲ್ಲಿ, ಸಿಟ್ಟಿನ ಭರದಲ್ಲಿ ಮನುಷ್ಯ ತನ್ನ ವಿವೇಕವನ್ನು ಕಳೆದುಕೊಂಡು, ಅಸಾಮಾನ್ಯವಾದ ರೀತಿಯಲ್ಲಿ ವರ್ತಿಸುತ್ತಾನೆ.

ಸಾಮಾನ್ಯ ಮತ್ತು ಅಸಾಮಾನ್ಯ ವ್ಯವಹಾರದ ರೇಖೆಯನ್ನು ಸಹ ಮನುಷ್ಯರಾದ ನಾವೇ ಎಳೆದಿದ್ದೇವೆ; ಇದು ಸರಿ, ಇದು ತಪ್ಪು; ಇದು ವಿನಯ, ಇದು ಅವಿನಯ. ಮಾನವ ಸಮಾಜ ಸಭ್ಯತೆಗಳ ಮೆಟ್ಟಿಲುಗಳನ್ನು ಎಷ್ಟು ಹತ್ತುತ್ತಾ ಹೋಯಿತೋ, ವಿನಯದ ಬಗ್ಗೆ ಮಾನವನ ದೃಷ್ಟಿಕೋನ ಅಷ್ಟೇ ಸಂಕುಚಿತವಾಗುತ್ತಾ ಸಾಗಿತು. ದುರದೃಷ್ಟದಿಂದ ಈ ಸಂಕುಚಿತ ದೃಷ್ಟಿಕೋನಗಳನ್ನು ಮಹಿಳೆಯ ಖಾತೆಗೆ ಹಾಕಲಾಯಿತು. ಪುರುಷನೊಬ್ಬ ಮಹಿಳೆಯೊಂದಿಗೆ ಬಲಾತ್ಕಾರದ ಸಂಭೋಗ ಮಾಡಿದರೆ ಅವಳು ಸಮಾಜದಲ್ಲಿ ತಲೆಯೆತ್ತಿ ಓಡಾಡಲಾರಳು. ಹಳೆಯ ಹಿಂದಿ ಸಿನಿಮಾಗಳಲ್ಲಿಯೂ ಇದೇ ಸಂಗತಿಗಳನ್ನು ಪೂರ್ಣ ಮಹಿಮೆಯೊಂದಿಗೆ ಉಣಬಡಿಸಲಾಗುತ್ತಿತ್ತು. ಇನ್ನೊಂದು ವಿಚಿತ್ರವೆಂದರೆ, ಯುವತಿಯೊಬ್ಬಳು ಗರ್ಭಿಣಿಯಾದರೆ ಅವಳಿಗೆ ಆತ್ಮಹತ್ಯೆಯನ್ನು ಬಿಟ್ಟು ಬೇರೆ ಮಾರ್ಗವೇ ಇರಲಿಲ್ಲ. ಆದರೆ ಯುವಕ ಬದುಕಿದ್ದು, ವಿವಾಹವನ್ನು ಮಾಡಿಕೊಳ್ಳಬಹುದು, ವಿಲಾಸದಲ್ಲಿ ಮುಳುಗಬಹುದು; ಆದರೆ ಯುವತಿ...? ಧಿಕ್ಕಾರ... ಇವೆಲ್ಲವೂ ಕಥೆ ಮಾತ್ರವಾಗಿದ್ದರೆ ಲೇಸಾಗಿತ್ತು. ದುರದೃಷ್ಟದಿಂದ ಇವೆಲ್ಲವೂ ಸಮಾಜದಲ್ಲಿ ಇಂದಿಗೂ ಇವೆ. ಮೊದಲನೆಯದಾಗಿ ಹೆಣ್ಣಿಗೆ ತನ್ನ ದೇಹದ ಮೇಲೆ ಅಧಿಕಾರವಿಲ್ಲ, ಅದರಲ್ಲೂ ಕುಮಾರಿ ಹುಡುಗಿಗಂತೂ ಇಲ್ಲವೇ ಇಲ್ಲ. ವಿವಾಹಿತೆ ತನ್ನ ಬೈತಲೆಗೆ ವಿವಾಹದ ಸಾಕ್ಷಿಯನ್ನು ಲೇಪಿಸಿಕೊಂಡು ಅಡ್ಡಾಡಬಹುದು! ಆದರೆ ಪುರುಷರಿಗೆ ವಿವಾಹದ ಬಗ್ಗೆ ಸಾಕ್ಷಿಯಿಟ್ಟುಕೊಳ್ಳುವ ಅಗತ್ಯವಿಲ್ಲ. ವಿವಾಹಿತ ಪುರುಷ, ಬೇರೊಂದು ಹೆಣ್ಣನ್ನು ಮೂರ್ಖಳಾಗಿ ಮಾಡಲು ಪತ್ನಿಪೀಡಿತನೆಂದು ಹೇಳಲು ಲೇಶಮಾತ್ರವೂ ಹಿಂಜರಿಯುವುದಿಲ್ಲ.

ಓಹ್! ಇದು ವಿವಾಹದ ಪದ್ಧತಿ. ಮಹಿಳೆಯ ಅಧಿಕಾರಗಳನ್ನು ಘೋಷಿಸಲಾಯಿತು. ಇದರಿಂದಾಗಿ ಅವಳ ಮಕ್ಕಳಿಗೆ ಸಾಮಾಜಿಕ ಮಾನ್ಯತೆ, ಆರ್ಥಿಕ ಸದೃಢತೆ ಮುಂತಾದವುಗಳು ಲಭಿಸಲೆಂದು ಕಾನೂನುಗಳನ್ನು ಮಾಡಲಾಯಿತು. ಆದರೆ ಸಮಾಜವೇ ಇದನ್ನು ತಮಾಷೆ ಮಾಡಿದೆ. ನಾನು ಈ ತಮಾಷೆಯ ಜೀವನವನ್ನು ಸಾಗಿಸಲು ಬಯಸುತ್ತಿರಲಿಲ್ಲ. ನಾನೆಂದೂ ವಿವಾಹವನ್ನು ಮಾಡಿಕೊಳ್ಳುವುದಿಲ್ಲವೆಂದು ಯೋಚಿಸಿದ್ದೆ. ತಾಯಿಯ ಅನುಭವಗಳ ಮೊಹರು ನನ್ನ ಮನಸ್ಸಿನಲ್ಲಿ ಅಂಕಿತವಾಗಿತ್ತು. ನಾನು ಅದನ್ನು ಬಯಸಿದ್ದಾಗ್ಯೂ ಅಳಿಸಲಾಗುತ್ತಿರಲಿಲ್ಲ. ವಿವಾಹವಾಗದ ತೀರ್ಮಾನ ನನ್ನದೇ ಆಗಿತ್ತು. ಇದರಲ್ಲಿ ಪ್ರತ್ಯಕ್ಷವಾಗಿ ಯಾರ ಒತ್ತಡವೂ ಇರಲಿಲ್ಲ. ಆದರೆ ಅಪ್ರತ್ಯಕ್ಷವಾಗಿ, ಸಂಬಂಧಗಳನ್ನು ಉಸಿರುಗಟ್ಟಿಸುವ ಬಂಧನವೆಂದು ತಿಳಿಯಲು ಬಾಧ್ಯಗೊಳಿಸಿದ ಎಲ್ಲಾ ಪರಿಸ್ಥಿತಿಗಳು ಹೊಣೆಯಾಗಿದ್ದವು.

ರಿತಿಕ್‌ನ ಮತ್ತು ನನ್ನ ವಿವಾದ ಬಹುಶಃ ಮಹಿಳೆ ಪುರುಷರ ಸಾಮಾಜಿಕ ಅಸ್ತಿತ್ವದ ಬಗ್ಗೆಯೇ ಪದೇ ಪದೇ ರೂಪ ತಾಳುತ್ತಿತ್ತು ಮತ್ತು ನಾಶವಾಗುತ್ತಿತ್ತು. ಇಲ್ಲ, ಅದೆಂದೂ ನಾಶವಾಗಲೇ ಇಲ್ಲ; ಪ್ರತಿಯಾಗಿ ಕೆಲವು ದಿನಗಳವರೆಗೆ ಶಾಂತವಾಗುತ್ತಿತ್ತು. ನಮ್ಮಲ್ಲಿ ವಿವಾದವಾದಾಗಲೆಲ್ಲಾ ರಿತಿಕ್ ಶಾರೀರಿಕವಾಗಿ ಬದಲಾಗಲಿಲ್ಲ. ರಿತಿಕ್ ದಯಾಳುವಾಗಿದ್ದ ಎಂದಲ್ಲ; ಏಕೆಂದರೆ ರಿತಿಕ್ ಮಾನಸಿಕವಾಗಿ ಪೆಟ್ಟು ಕೊಡುವಲ್ಲಿ ನಿಪುಣನಾಗಿದ್ದ. 'ನಾನು ಮನದಟ್ಟು ಮಾಡಿಸಬಲ್ಲೆ, ಹೇಳುವುದಿಲ್ಲ' ಈ ಗರ್ವದ ಮಾತು ರಿತಿಕ್‌ನ ನಾಲಿಗೆಯಲ್ಲಿ ಸದಾ ಕುಣಿಯುತ್ತಿತ್ತು. ಈ ಗರ್ವೋಕ್ತಿ ನನ್ನ ಮನಸ್ಸಿನಲ್ಲೂ ಶಿಲೆಯಂತೆ ಅಪ್ಪಳಿಸುತ್ತದೆ ಎಂದು ನನಗೂ ಮೊದಲು ಗೊತ್ತಿರಲಿಲ್ಲ. ಮನಸ್ಸಿಗಾದ ಪೆಟ್ಟು ಮೆದುಳಿನ ಪೆಟ್ಟಿಗಿಂತ ಹೆಚ್ಚು ಅಪಾಯಕರ. ಇದರಿಂದ ಮನುಷ್ಯನ ಜೀವ ಸಹ ಹೋಗಬಹುದು ಎಂಬುದು ರಿತಿಕ್‌ಗೆ ತಿಳಿದಿದೆ. ಮನುಷ್ಯ ಶರೀರಕ್ಕಾಗುವ ಪೆಟ್ಟನ್ನು ಸಹಿಸುತ್ತಾನೆ, ಆದರೆ ಮನಸ್ಸಿಗಾಗುವ ಪೆಟ್ಟನ್ನು ಸಹಿಸಿಕೊಳ್ಳುವುದು ತುಂಬಾ ಕಷ್ಟ. ಸುಮಾರಾಗಿ ಅಸಂಭವವೂ ಹೌದು.

ನಾನು ರಿತಿಕ್‌ನ ಮಾತುಗಳನ್ನು ಅನೇಕ ದಿನಗಳವರೆಗೆ ಗುಣುಗುಣಿಸಿದೆ. ರಿತಿಕ್ ಹೀಗೇಕೆ ಹೇಳಿದ? ರಿತಿಕ್ ಹೀಗೇಕೆ ಹೇಳಿದ? ನನಗೆ ಉತ್ತರ ಸಿಗುವುದಿಲ್ಲ. ಪ್ರತಿ ಬಾರಿಯೂ ಉತ್ತರವನ್ನು ಅರಸುವಲ್ಲಿ ಅಪಯಶಸ್ಸು ಪಡೆದಾಗ ನನ್ನ ಮನಸ್ಸಿನಲ್ಲಿ, ರಿತಿಕ್ ಹೇಳಿದ ವಿಷಯಗಳು ನಿಜವಲ್ಲ ತಾನೇ ಎಂಬ ಪ್ರಶ್ನೆ ತಲೆ ಎತ್ತಲಾರಂಭಿಸಿತು. ನಾನು ರಿತಿಕ್ ಹೇಳಿದಂತೆ, 'ಯಾವುದೇ ಪುರುಷನನ್ನು ನೋಡಿ, ಜೊಲ್ಲು ಸುರಿಸುವವಳೇ?'

ರಿತಿಕ್‌ನ ಈ ಮಾತುಗಳು ನನ್ನನ್ನು ನನ್ನ ಕಚೇರಿಯ ಪುರುಷರಿಂದ ಎಷ್ಟು ದೂರಕ್ಕೆ ತಳ್ಳಿತೆಂದರೆ, ನಾನಿನ್ನು ಸಹ ಅವರೊಂದಿಗೆ ಸಹಜತೆಯಿಂದ ವರ್ತಿಸಲಾಗುತ್ತಿಲ್ಲ. ಮೊದಲು ಅವರೊಂದಿಗೆ ನನ್ನ ಸಾಮಾನ್ಯ ಸಂಬಂಧವಿದ್ದವು;